ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಈ ಕಾಲದ ಬಗ್ಗೆ ಎಲ್ಲಾ ಚರ್ಚೆ ಮಾಡಬೇಕೆಂದರೆ ಬಹಳ ಚ ರ್ಚೆ ಮಾಡಬೇಕಾಗುತ್ತದೆ. ಸುಮ್ಮನೆ ಗೊತ್ತಿಲ್ಲದೇ ಇರತಕ್ಕಂಥ ವಿಚಾರಗಳನ್ನೆಲ್ಲಾ ಮಾತನಾಡಲಿಕ್ಕೆ ಹೋದರೆ ಅಂಕಿಅಂಶಗಳನ್ನು ತೆಗೆದು ನಾವು ಹೇಳಬೇಕಾಗುತ್ತದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಅಥವಾ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ. ಯಾವಾಗ ಏನು ಮಾಡಬೇಕು...

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಕೊಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ....ನಮ್ಮ ಹಕ್ಕಿನ ಪ್ರಶ್ನೆ ಇದು. ಯಾರೋ ನಾಲ್ಕು ಜನ ಕೂಗಿ ಬಿಡುತ್ತಾರೆಂದು ನಾವು ಅದನ್ನು ಕೇಳಿಕೊಳ್ಳುವುದಕ್ಕಾಗುತ್ತದೆಯೇ?

(ಗೊಂದಲ)

Mr. Speaker:- Don't talk like that.

(ಗೊಂದಲ)

ಶ್ರೀ ಕೆ. ಅಭಯಚಂದ್ರ :- ..... ಏನು? .....

Mr. Speaker:- Don't take like that

Mr. Speaker:- Don't take down

(ಗೊಂದಲ)

ಅಧ್ಯಕ್ಷರು :- ಮಾನ್ಯ ಸಂಸದೀಯ ಸಚಿವರು ಮಾತನಾಡಲು ಎದ್ದು ನಿಂತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಇದು ನಮ್ಮ ಆತ್ಮಗೌರವದ ಪ್ರಶ್ನೆ. ನಾಳೆಯ ದಿನ ನಾವೂ ಸಹ ಈ ಭ್ರಷ್ಟಾಚಾರ, ಈ ವಂಚನೆಗಳಿಗೆ ಒಳಗಾಗುತ್ತೇವೆ ಎನ್ನುವುದಾದರೆ ನಮ್ಮನ್ನು ತೆಗೆದು ಬಿಸಾಕಿ. ಈ ರೀತಿಯಾಗಿ ಸದನದಲ್ಲಿ ಇವರ ಕೈಯಲ್ಲಿ ಬೈಸಿಕೊಂಡು ಹೋಗುವುದಕ್ಕೆ ನಾವು ಇಲ್ಲಿ ಬಂದಿಲ್ಲ....

(ಗೊಂದಲ)

Mr. Speaker:- Don't take down.

(ಗೊಂದಲ)

(ಈ ಹಂತದಲ್ಲಿ ಜನತಾ ದಳ (ಯು) ಮತ್ತು ಜನತಾ ದಳ (ಎಸ್) ಪಕ್ಷದ ಶಾಸಕರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

ಅಧ್ಯಕ್ಷರು :- ಮಾನ್ಯ ನಾಡಗೌಡರೇ, ಇದೇನ್ರಿ? What is this?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೇ, ತಾವು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು...

(ಗೊಂದಲ)